ಓ.ಎಸ್. ನಂ. 86/2018 ಪಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 1.3.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಕೆ ವಕೀಲರಿಂದಃ**

ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಶಾಲಾ ದಾಖಲೆಗಳಲ್ಲಿ ನನ್ನ ಹೆಸರು ಉಮಾಶಂಕರ್ ಎಂದು ನಮೂದಾಗಿರುತ್ತದೆ. ನನ್ನ ತಂದೆ 1994 ರಿಂದ 1999 ರವರೆಗೆ ಹೆಚ್.ಡಿ.ಕೋಟೆಯ ಶಾಸಕರಾಗಿದ್ದರು. 3 ನೇ ಪ್ರತಿವಾದಿಗೆ 2003 ರಲ್ಲಿ ಮದುವೆಯಾಗಿದ್ದು ಅವರು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ನಾನು ಮತ್ತು 4 ನೇ ಪ್ರತಿವಾದಿ ಸಂಬಂಧಿಕರಾಗಿರುವುದಿಲ್ಲ. 4 ನೇ ಪ್ರತಿವಾದಿಯು ದಾವಆಸ್ತಿಗೆ ಹಿಂದೆ ಮಾಲೀಕರಾಗಿದ್ದರು ಎಂದರೆ ಸರಿ. ಅವರು ದಾವಆಸ್ತಿಯನ್ನು ದಿನಾಂಕ 21.11.1996 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ3 ಅವರು ಖರೀದಿ ಮಾಡಿರುವ ಕ್ರಯಪತ್ರ ಎಂದರೆ ಸರಿ. ನಿಪಿ4 ರಿಂದ 7 ದಾವಆಸ್ತಿಗೆ ಸಂಬಂಧಪಟ್ಟ ಇ.ಸಿ ಎಂದರೆ ಇರಬಹುದು. ನಾನು 4 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. ನಿಪಿ2 ರ ಪ್ರತಿ ಪುಟದಲ್ಲಿರುವ ಸಹಿ 4 ನೇ ಪ್ರತಿವಾದಿಯ ಸಹಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅವುಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ಒಟ್ಟಾಗಿ ನಿಪಿ2 ಸಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಎರಡನೇ ಪುಟದಲ್ಲಿರುವ ಭಾವಚಿತ್ರ 4 ನೇ ಪ್ರತಿವಾದಿಯ ಭಾವಚಿತ್ರ ಎಂದರೆ ಸರಿ. ಸದರಿ ಭಾಗವನ್ನು ನಿಪಿ2 ಡಿ ಎಂದು ಗುರುತಿಸಲಾಯಿತು. 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿದಾಗ 4 ನೇ ಪ್ರತಿವಾದಿಯೇ ಅದರ ಮಾಲೀಕರಾಗಿದ್ದರು ಎಂದರೆ ಸರಿ. 5 ನೇ ಪ್ರತಿವಾದಿಯು ದಾವಆಸ್ತಿಯನ್ನು ಖರೀದಿಸಿದ ನಂತರ ಸದರಿ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎನ್ನುವರು. ನಿಪಿ1 ರ ಪ್ರಕಾರ 5 ನೇ ಪ್ರತಿವಾದಿಯು 6.80 ಲಕ್ಷ ರೂ.ಗಳಿಗೆ ದಾವಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನಿಪಿ1 ಕ್ರಯಪತ್ರದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ನಿಪಿ1 ಕ್ರಯಪತ್ರವನ್ನು ಸೃಷ್ಟಿಸಿರುತ್ತಾರೆ ಎಂದು ನಾನು ಎ.ಸಿ ನ್ಯಾಯಾಲಯ ಮತ್ತು ಡಿ.ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ. ಸದರಿ ಕ್ರಯಪತ್ರ ಅಸಿಂಧು ಎಂದು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹಾಕಿರುವುದಿಲ್ಲ. ವಾದಿಯು ದಾವಆಸ್ತಿಯನ್ನು ಖರೀದಿಸಿದ ನಂತರ ಖಾತೆಗೆ ಸಂಬಂಧಿಸಿದಂತೆ ಪುರಸಭೆ, ಡಿ.ಸಿ ನ್ಯಾಯಾಲಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಗಳು ನಡೆದಿರುತ್ತದೆ ಎಂದರೆ ಸರಿ. ನಿಪಿ7 ರ ಪ್ರಕಾರ ಡಿ.ಸಿ ನ್ಯಾಯಾಲಯದಲ್ಲಿ ನನ್ನ ತಂದೆಯ ಹೆಸರಿಗೆ ಆಗಿದ್ದ ಖಾತೆಯನ್ನು ರದ್ದುಪಡಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು

4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಇಡಬೇಕೆಂದು ಆದೇಶವಾಗಿರುತ್ತದೆ ಎನ್ನುವರು. ನಿಪಿ7 ರಲ್ಲಿ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಇಡಬೇಕೆಂದು ಆದೇಶವಿರುವುದಿಲ್ಲ ಎಂದರೆ ಸರಿ. ನಿಪಿ7 ರ ಪ್ರಕಾರ ನಿಯಮಾನುಸಾರ ವಿಚಾರಣೆ ಮಾಡಿ ವಾದಿಯ ಹೆಸರಿಗೆ ಖಾತೆ ಮಾಡಲು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ದಾವಆಸ್ತಿಯನ್ನು ವಾದಿಯು ಖರೀದಿಸಿದ ದಿನದಿಂದ ಸದರಿ ಆಸ್ತಿಯ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ರಾಜಕೀಯದಲ್ಲಿದ್ದರಿಂದ 4 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಕೆಲವು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ರಾಜಸ್ತಾನದಿಂದ ಬಂದವರು ಎಂದರೆ ಸರಿ. ನನ್ನ ಪ್ರಕಾರ ನನ್ನ ತಂದೆಯ ಹೆಸರಿಗೆ ದಿನಾಂಕ 2.8.2006 ರಂದು ದಾನಪತ್ರವಾಗಿರುತ್ತದೆ. ಸಾಕ್ಷಿದಾರರು ಮುಂದುವರಿದು ದಿನಾಂಕ 25.12.2003 ರಂದು ನೋಂದಣಿಯಾಗದ ದಾನಪತ್ರವಾಗಿರುತ್ತದೆ ಎನ್ನುವರು. ದಿನಾಂಕ 25.12.2003 ರಂದು ಆಗಿದೆ ಎಂದು ಹೇಳುವ ದಾನಪತ್ರಕ್ಕೆ ಮಹದೇವಪ್ಪ ಎಂಬುವವರು ಸಾಕ್ಷಿದಾರರಾಗಿರುತ್ತಾರೆ. ಅದನ್ನು ಯಾರು ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಎಂ.ಎಲ್.ಎ ಆಗಿದ್ದ ನನ್ನ ತಂದೆಗೆ ನೋಂದಣಿಯಾಗದ ದಾನಪತ್ರ ಬರೆದುಕೊಡುವ ಉದ್ದೇಶ ಏನಿತ್ತು ಎಂದರೆ ಸಾಕ್ಷಿದಾರರು 4 ನೇ ಪ್ರತಿವಾದಿಯು ರಾಜಸ್ತಾನದಿಂದ ಬಂದಿದ್ದು, ಅವರು ಹತ್ತಿ ವ್ಯಾಪಾರ ಮಾಡುತ್ತಿದ್ದು ಅವರಿಗೆ ನಷ್ಟವಾದಾಗ ನನ್ನ ತಂದೆ ಸಹಾಯ ಮಾಡಿದ್ದು ಅವರು ಹೆಚ್.ಡಿ.ಕೋಟೆ ಬಿಟ್ಟು ಹೋಗುವಾಗ ನನ್ನ ತಂದೆಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು. 4 ನೇ ಪ್ರತಿವಾದಿಗೆ ದಾವ ಮನೆ ಮಾತ್ರ ಇತ್ತು ಎಂದರೆ ಸರಿ. ಸದರಿ ದಾನಪತ್ರವನ್ನು ನೋಂದಣಿ ಮಾಡಿಸಲು ಏನು ತೊಂದರೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ನೋಂದಣಿಯಾಗದ ದಾನಪತ್ರವನ್ನು ನನ್ನ ತಂದೆ ರಾಜಕೀಯ ಪ್ರಭಾವ ಬಳಸಿ ಅದನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಂದಣಿಯಾಗದ ದಾನಪತ್ರದ ಪ್ರಕಾರ ನನ್ನ ತಂದೆಗೆ ದಾವಆಸ್ತಿಯ ಹಕ್ಕು, ಅಧಿಕಾರ ಅಥವಾ ಸ್ವಾಧೀನ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನೋಂದಣಿಯಾಗದ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದು ಹೇಳುವ ದಿನ ಆಸ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು 4 ನೇ ಪ್ರತಿವಾದಿಯು ನನ್ನ ತಂದೆಗೆ ನೀಡಿರುವ ಬಗ್ಗೆ ನನಗ ಗೊತ್ತಿರುವುದಿಲ್ಲ. ಸದರಿ ದಾನಪತ್ರವನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಆಸ್ತಿಯನ್ನು ಕಬಳಿಸಲು ನನ್ನ ತಂದೆ ಸದರಿ ನೋಂದಣಿಯಾಗದ ದಾನಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ದಾನಪತ್ರ ಮಾಡಿಕೊಡುವ ಉದ್ದೇಶ 4 ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ನಿಡಿ2 ದಾನಪತ್ರವಾಗುವ ಪೂರ್ವದಲ್ಲಿ 4 ನೇ ಪ್ರತಿವಾದಿಯು ದಾವಆಸ್ತಿಯನ್ನು ನಿಪಿ2 ರಂತೆ 5 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಅದನ್ನು ಸೃಷ್ಟಿ

ಮಾಡಿಕೊಂಡಿರುತ್ತಾರೆ ಎನ್ನುವರು. ಯಾವ ಕಾರಣಕ್ಕೆ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿದಾರರು 5 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುವುದಿಲ್ಲ ಎನ್ನುವರು. ನಿಪಿ5 ರಲ್ಲಿ 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಮಾಡಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಸದರಿ ಸಮಯದಲ್ಲಿ ಖಾತೆಯು ನನ್ನ ತಂದೆಯ ಹೆಸರಿನಲ್ಲಿತ್ತು ಎನ್ನುವರು. ನಿಪಿ11 ರಿಂದ 15 ರಂತೆ 5 ನೇ ಪ್ರತಿವಾದಿಯು ದಾವಆಸ್ತಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸಿರುತ್ತಾರೆ ಎಂದರೆ ಸಾಕ್ಷಿದಾರರು ಅವುಗಳನ್ನು ಸೃಷ್ಟಿ ಮಾಡಿರುತ್ತಾರೆ ಎನ್ನುವರು. ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿ ಅದೇಶ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದರ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎನ್ನುವರು. 5 ನೇ ಪ್ರತಿವಾದಿಯು ಅವರ ಮಾಲೀಕತ್ವದ ದಾವಸ್ವತ್ತನ್ನು ನಿಪಿ1 ರ ಪ್ರಕಾರ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಅದನ್ನು ಸೃಷ್ಟಿ ಮಾಡಿರುತ್ತಾರೆ ಎನ್ನುವರು. 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ದಾವಆಸ್ತಿಯನ್ನು ಆಗಲೇ ಮಾರಾಟ ಮಾಡಿದ್ದರಿಂದ ನನ್ನ ತಂದೆಗೆ ನಿಡಿ2 ರಂತೆ ದಾನಪತ್ರ ಮಾಡಿಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ 5 ನೇ ಪ್ರತಿವಾದಿಗೆ ಆಗಿರುವ ಕ್ರಯಪತ್ರ ಹಾಗೂ 5 ನೇ ಪ್ರತಿವಾದಿಯಿಂದ ವಾದಿಗೆ ಆಗಿರುವ ಕ್ರಯಪತ್ರವನ್ನು ನಾನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನಿಡಿ2 ದಾನಪತ್ರವನ್ನು ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಶಾಮೀಲಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ2 ದಾಖಲೆಯು ನಾಮಕಾವಸ್ತೆ ದಾಖಲೆಯಾಗಿದ್ದು ಅದರ ಪ್ರಕಾರ ನನ್ನ ತಂದೆಗೆ ಯಾವುದೇ ಆಸ್ತಿಯ ಹಕ್ಕು ಮತ್ತು ಸ್ವಾಧೀನ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ2 ದಾಖಲೆಯಾಗಿದೆ ಎಂದು ಹೇಳುವ ಸಮಯದಲ್ಲಿ ವಾದಿ ಮತ್ತು ನನ್ನ ತಂದೆಯ ನಡುವೆ ವ್ಯಾಜ್ಯ ಪ್ರಾರಂಭವಾಗಿತ್ತು ಎಂದರೆ ಸರಿಯಲ್ಲ. ನಿಡಿ2 ದಾಖಲೆಯನ್ನು ಬರೆದುಕೊಡಲು 4 ನೇ ಪ್ರತಿವಾದಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ2 ದಾಖಲೆಯನ್ನು ಯಾರ ಸಮಕ್ಷಮ ಬರೆದುಕೊಟ್ಟಿರುತ್ತಾರೆ ಮತ್ತು ಅದನ್ನು ತಯಾರಿಸಿದವರು ಯಾರು ಎಂದು ನೆನಪಿರುವುದಿಲ್ಲ. ನಿಡಿ2 ನ್ನು ಬರೆದುಕೊಡುವ ಉದ್ದೇಶ ಏನೆಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ಕಬಳಿಸಲು ಆಸ್ತಿಯ ಮೇಲೆ ಹಕ್ಕಿಲ್ಲದಿದ್ದರೂ 4 ನೇ ಪ್ರತಿವಾದಿಯ ಜೊತೆ ನನ್ನ ತಂದೆ ಶಾಮೀಲಾಗಿ ನಿಡಿ2 ನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ರಾಜಕೀಯದಲ್ಲಿದ್ದರಿಂದ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಅವರ ಅನುಕೂಲಕ್ಕೆ ತಕ್ಕಂತೆ ನಿಡಿ6 ಹಾಗೂ ಇತರ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ7 ಪ್ರಮಾಣಪತ್ರವನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ7 ರಲ್ಲಿ ದಿನಾಂಕ

25.12.2003 ರ ನೋಂದಣಿಯಾಗದ ದಾನಪತ್ರದ ಅಂಶವನ್ನು ಕೈಬರವಣಿಗೆಯಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದನ್ನು 4 ನೇ ಪ್ರತಿವಾದಿಯೇ ಬರೆದುಕೊಟ್ಟಿರುತ್ತಾರೆ ಎನ್ನುವರು. 4 ನೇ ಪ್ರತಿವಾದಿ ಮತ್ತು ನನ್ನ ತಂದೆ ಶಾಮೀಲಾಗಿ ನಿಡಿ7 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ7 ಪ್ರಮಾಣಪತ್ರ ತಯಾರಿಸುವ ಪೂರ್ವದಲ್ಲೇ ಡಿ.ಸಿ ನ್ಯಾಯಾಲಯದಲ್ಲಿ ನಿಪಿ7 ರಂತೆ ಆದೇಶವಾಗಿತ್ತು ಎಂದರೆ ಸರಿ. ನಿಡಿ8 ರಿಂದ 10 ದಾಖಲೆಗಳನ್ನು ಪುರಸಭೆ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ11 ರಂತೆ 4 ನೇ ಪ್ರತಿವಾದಿಗೆ ಅರ್ಜಿ ನೀಡಲು ಅಧಿಕಾರ ಇರಲಿಲ್ಲ, ಅದನ್ನು ನನ್ನ ತಂದೆ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ12 ದಾಖಲೆಯನ್ನು ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ದಾವಆಸ್ತಿಯನ್ನು ಕಬಳಿಸಲು ನನ್ನ ತಂದೆ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ತಂದೆ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿಯರಾದ ನಾವು ಶಾಸಕರ ಹೆಂಡತಿ ಮತ್ತು ಮಕ್ಕಳಾಗಿರುವುದರಿಂದ ಹೆಚ್.ಡಿ.ಕೋಟೆಯಲ್ಲಿ ಸಾರ್ವಜನಿಕರಿಗೆ ಪರಿಚಯಸ್ಥರು ಎಂದರೆ ಸರಿ. ನನ್ನನ್ನು ಶಂಕರ್ ಎಂದು ಹೆಚ್.ಡಿ.ಕೋಟೆ ಟೌನಿನಲ್ಲಿ ಎಲ್ಲರೂ ಗುರುತಿಸುತ್ತಾರೆ ಎಂದರೆ ಸಾಕ್ಷಿದಾರರು ಕೆಲವರು ಗುರುತಿಸುತ್ತಾರೆ, ಕೆಲವರು ಗುರುತಿಸುವುದಿಲ್ಲ ಎನ್ನುವರು. ದಾವಆಸ್ತಿಗೆ ಸಂಬಂಧಿಸಿದಂತೆ ಹುಣಸೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದಿರುತ್ತದೆ ಎಂದರೆ ಸರಿ. ಸದರಿ ದಾವೆಯು ವಾದಿಯ ಪರವಾಗಿ ದಿನಾಂಕ 25.1.2014 ರಂದು ತೀರ್ಮಾನವಾಗಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನಲ್ಲಿ 60 ದಿನಗಳ ಒಳಗೆ ಸ್ವಾಧೀನ ಬಿಟ್ಟುಕೊಡಬೇಕು ಮತ್ತು 3.50 ಲಕ್ಷ ನಷ್ಟ ತುಂಬಿಸಿಕೊಡಬೇಕೆಂದು ಆದೇಶವಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇವೆ ಎನ್ನುವರು. ನಾನು ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 25.4.2006 ರಂದು ನನ್ನ ತಂದೆ ರಾಜಕೀಯ ಪ್ರಭಾವ ಬಳಸಿ ದಾವಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ದಿನಾಂಕ 25.3.2003 ರ ದಾನಪತ್ರದ ಪ್ರಕಾರ ಅಂದಿನಿಂದಲೂ ಸ್ವಾಧೀನದಲ್ಲಿರುತ್ತೇವೆ ಎನ್ನುವರು. ಎಲ್ಲ ವಿಚಾರಗಳನ್ನು ತಿಳಿಸಿ ವಾದಿಯು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ವಕೀಲರ ಮೂಲಕ 1 ರಿಂದ 3 ನೇ ಪ್ರತಿವಾದಿ ಹಾಗೂ ಇತರ ಪ್ರತಿವಾದಿಯರಿಗೆ ನೋಟಿಸ್ ನೀಡಿದ್ದರು ಎಂದರೆ ಸಾಕ್ಷಿದಾರರು ನನ್ನ ತಂದೆ ತೀರಿಕೊಂಡಿದ್ದರಿಂದ ನನ್ನ ತಾಯಿಗೆ ಮಾನಸಿಕ ಅಘಾತವಾಗಿದ್ದು ಅವರು ನೋಟಿಸನ್ನು ಎಲ್ಲಿ ಇಟ್ಟಿದ್ದರು ಎಂದು ಗೊತ್ತಿರಲಿಲ್ಲ, ನಂತರ ಗೊತ್ತಾಗಿರುತ್ತದೆ ಎನ್ನುವರು. ನಿಪಿ28 ರಿಂದ 30 ಅಂಚೆ ಸ್ವೀಕೃತಿ ಪತ್ರದಲ್ಲಿರುವ

ಸಹಿಗಳು 1 ರಿಂದ 3 ನೇ ಪ್ರತಿವಾದಿಯರ ಸಹಿಗಳು ಎಂದರೆ ಸರಿ. ಸದರಿ ನೋಟಿಸುಗಳಿಗೆ ವಕೀಲರ ಮೂಲಕ ಉತ್ತರ ನೀಡಿರುವುದಿಲ್ಲ ಎಂದರೆ ಸರಿ. ಎಲ್ಲ ವಿಚಾರಗಳು ಗೊತ್ತಿದ್ದು ದಾವಆಸ್ತಿಯ ಸ್ವಾಧೀನವನ್ನು ವಾದಿಗೆ ಬಿಟ್ಟುಕೊಡದೇ ತಕರಾರು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಮನೆಯು ಆರ್.ಸಿ.ಸಿ ಮನೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ಈಗ ಹೊಸದಾಗಿ ಅಭಿವೃದ್ಧಿ ಮಾಡಿರುತ್ತೇನೆ ಎನ್ನುವರು. ದಾವಆಸ್ತಿಯು ಹೆಚ್.ಡಿ.ಕೋಟೆಯ 2 ನೇ ಮುಖ್ಯ ರಸ್ತೆಯಲ್ಲಿರುವ ಮನೆ ಎಂದರೆ ಸರಿ. ದಾವಮನೆಯನ್ನು ಈಗ ಬಾಡಿಗೆಗೆ ನೀಡಿದರೆ ತಿಂಗಳಿಗೆ 7–8 ಸಾವಿರ ಬಾಡಿಗೆ ಬರಬಹುದು. ವಾದಿ ಸಾಕ್ಷಿ–2 ರವರು ನನಗೆ ಪರಿಚಯವಿರುವುದಿಲ್ಲ. ವಾದಿ ಸಾಕ್ಷಿ–3 ರವರ ಪರಿಚಯವಿರುತ್ತದೆ. ಅವರಿಗೂ ನನಗೂ ದ್ವೇಷವಿರುವುದಿಲ್ಲ, ಆದರೆ ಅವರು 5 ನೇ ಪ್ರತಿವಾದಿಯ ಜೊತೆ ಪೈನಾನ್ಸ ಮಾಡುತ್ತಿದ್ದರು ಎನ್ನುವರು. ವಾದಿ ಸಾಕ್ಷಿ–3 ರವರಿಗೆ ದಾವಮನೆಯ ಬಗ್ಗೆ ಗೊತ್ತಿರುತ್ತದೆ. ವಾದಿ ಸಾಕ್ಷಿ–4 ರವರು ನನಗೆ ಪರಿಚಯವಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.